ಉಂಟಂತೆ. ಅಲ್ಲಿನ ಯಂತ್ರದಿಂದಲೂ ಈ ರೀತಿ ಬರುವ ಸಾಧ್ಯತೆ ಉಂಟು ಎಂದು ಅವರು ಹೇಳುತ್ತಿದ್ದಾರೆ. ಆದುದರಿಂದ ನಾನು ರಾಜ್ಯ ಸರ್ಕಾರವನ್ನು ವಿನಂತಿ ಮಾಡುತ್ತಿದ್ದೇನೆ, ಜನರ ನಿತ್ಯೋಪಯೋಗಿ ವಸ್ತುವಾದಂಥ ಹಾಲನ್ನು ಅದರಲ್ಲೂ ಜನರ ಆರೋಗ್ಯದ ದೃಷ್ಟಿಯಿಂದ ದಯವಿಟ್ಟು ಇದರ ಬಗ್ಗೆ ಕಾಳಜಿ ತೆಗೆದುಕೊಂಡು ಇದನ್ನು ಪರೀಕ್ಷೆ ಮಾಡಬೇಕು. ಇದರ ಜೊತೆಗೆ ಮಂಗಳೂರು ನಗರದಲ್ಲಿ ಕೃಷ್ಣಾ ಹಾಲು ಸರಬರಾಜು ಎಂದು ಉಂಟು. ಅದರಲ್ಲಿ ಏನೂ ತೊಂದರೆ ಇಲ್ಲ. ಆದ್ದರಿಂದ ದಯಮಾಡಿ ಇದರ ಬಗ್ಗೆ ಜಾಗ್ರತೆ ವಹಿಸಿ, ಇದರಲ್ಲಿ ಏನಾದರೂ ಕಲಬೆರಕೆಯಾಗುತ್ತಿದೆಯೇ ಎಂದು ಪರಿಶೀಲಿಸಿ ಇದರಿಂದ ಜನರ ಆರೋಗ್ಯಕ್ಕೆ ತೊಂದರೆಯಾಗದಂತೆ ಇದನ್ನು ತಕ್ಷಣ ನಿಲ್ಲಿಸಿ, ಬದಲಿ ವ್ಯವಸ್ಥೆ ಮಾಡಿಕೊಡಬೇಕೆಂದು ಸರ್ಕಾರವನ್ನು ವಿನಂತಿ ಮಾಡುತ್ತಿದ್ದೇನೆ.

ಶ್ರೀ ಬಿ.ಬಿ. ನಿಂಗಯ್ಯ (ಪಶುಸಂಗೋಪನಾ ರಾಜ್ಯ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೇ, ಅವರು ಹೇಳುತ್ತಿರತಕ್ಕಂಥ ವಿಚಾರದ ಬಗ್ಗೆ ನಾನು ಮಾಹಿತಿಯನ್ನು ತರಿಸಿಕೊಂಡಿದ್ದೇನೆ. ದಕ್ಷಿಣ ಕನ್ನಡ ಹಾಲು ಒಕ್ಕೂಟದಲ್ಲಿ ದಿನಾ ಸುಮಾರು 90 ಸಾವಿರ ಲೀಟರ್ ಹಾಲಿನ ಬೇಡಿಕೆ ಇದೆ. ಆದರೆ ಉತ್ಪಾದನೆ ಇರತಕ್ಕಂಥಾದ್ದು 55 ಸಾವಿರ ಲೀಟರ್ ಮಾತ್ರ. ಸುಮಾರು 45 ಸಾವಿರ ಲೀಟರ್ ಕಡಿಮೆಯಾಗುತ್ತದೆ. ಆದ ಪ್ರಯುಕ್ತ ನಾವು ಉತ್ಪಾದನೆಯಾದಂಥ 55 ಸಾವಿರ ಲೀಟರ್ ಹಾಲನ್ನು ಮಾರಿದ ನಂತರ ಕಡಿಮೆಯಾಗತಕ್ಕಂಥಾದ್ದಕ್ಕೆ ಹಾಸನ ಮುಂತಾದ ಬೇರೆ ಬೇರೆ ಕಡೆಗಳಿಂದ ತರಿಸಿಕೊಂಡು, ಅದಕ್ಕೆ ಪೌಡರ್‌ಅನ್ನು ಮಿಕ್ಸ್ ಮಾಡಿ ಹಾಲು ಮಾಡಿ ಮಾರತಕ್ಕಂಥಾದ್ದು ನಿಜ. ಸುಮಾರು ಶೇ.10ರಷ್ಟು ಪೌಡರ್‌ಅನ್ನು ಸೇರಿಸಿ ಹಾಲು ಪ್ಯಾಕೆಟ್ ಮಾಡಿ ಮಾರುತ್ತಿದ್ದರು. ಅದರಿಂದಾಗಿ ತಾವು ಹೇಳಿದ ಹಾಗೆ ವಾಸನೆ ಬರುತ್ತಿತ್ತು. ಮತ್ತು ಅದರಿಂದ ಆರೋಗ್ಯಕ್ಕೆ ಹಾನಿಯಾಗುತ್ತದೆ ಎನ್ನುವ ಆತಂಕ ಜನರಲ್ಲಿ ಮೂಡಿದ್ದರೆ ಅದು ಸರ್ವೇ ಸಾಮಾನ್ಯ. ಇದು ನಮ್ಮ ಗಮನಕ್ಕೆ ಬಂದ ಮೇಲೆ ನಾವು ಅದನ್ನು ಶೇ. 2.5ಕ್ಕೆ ಇಳಿಸಿ ಈಗ ತೊಂದರೆಯಾಗದ ಹಾಗೆ, ಹಾಲು ಒಡೆಯದ ಹಾಗೆ ಅಥವಾ ಹೆಚ್ಚು ವಾಸನೆ ಬರದ ಹಾಗೆ ಕ್ರಮ ಕೈಗೊಂಡಿದ್ದೇವೆ. ಹಾಲಿನ ಪುಡಿಯನ್ನು ಸೇರಿಸುವುದರಿಂದ ಯಾವುದೇ ರೀತಿಯ ಹಾನಿ ಆರೋಗ್ಯಕ್ಕೆ ಆಗುವುದಿಲ್ಲ ಎನ್ನುವಂಥ ವಿಚಾರವನ್ನು ತಮ್ಮ ಮೂಲಕ ಸ್ಪಷ್ಟಪಡಿಸುತ್ತೇನೆ.

ಪಡಿತರ ವ್ಯವಸ್ಥೆಯಲ್ಲಿ ಪಡೆಯುವ ಚಿಮಣಿಎಣ್ಣೆ ಕೂಪನ್ ಪಡೆಯಲು ಕಡ್ಡಾಯವಾಗಿ ಫೋಟೋ ಅಳವಡಿಸುವ ಬಗ್ಗೆ.

ಶ್ರೀ ಎನ್. ಯೋಗೀಶ್ ಭಟ್ (ಮಂಗಳೂರು) : ಸನ್ಮಾನ್ಯ ಉಪಾಧ್ಯಕ್ಷರೇ, ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಅದರಲ್ಲೂ ವಿಶೇಷವಾಗಿ ಮಂಗಳೂರು ಮಹಾನಗರ ಪಾಲಿಕೆಯ ಕ್ಷೇತ್ರದ ವ್ಯಾಪ್ತಿಯಲ್ಲಿ ಪಡಿತರ ಕಾರ್ಡ್ ಇರುವಂಥ ಪ್ರತಿಯೊಬ್ಬರೂ ಚಿಮಣಿಎಣ್ಣೆಯನ್ನು ಪಡೆಯಬೇಕಾದರೆ ಅದಕ್ಕೆ ಸಂಬಂಧಪಟ್ಟ ಕೂಪನ್‌ಅನ್ನು ಪಡೆಯಬೇಕಾಗಿದೆ. ಕೂಪನ್‌ಅನ್ನು ಪಡೆಯಬೇಕಾದರೆ ಕಡ್ಡಾಯವಾಗಿ ಫೋಟೋವನ್ನು ಅಳವಡಿಸಬೇಕು ಎಂದು ರಾಜ್ಯ ಸರ್ಕಾರ ಆದೇಶ ಮಾಡಿದೆ ಎಂದು ತಿಳಿದುಕೊಂಡಿದ್ದೇನೆ.

ಇದು ರಾಜ್ಯ ಸರ್ಕಾರದ ಸಚಿವ ಸಂಪುಟದ ತೀರ್ಮಾನವೋ ಅಥವಾ ಅಧಿಕಾರಿಗಳ ತೀರ್ಮಾನವೋ ಎಂದು ಗೊತ್ತಿಲ್ಲ. ಇದರ ಬಗ್ಗೆ ಒಂದು ವಿವರಣೆಯನ್ನು ಕೊಡಬೇಕು. ಅಷ್ಟು ಮಾತ್ರವಲ್ಲ, 1988-89ರಲ್ಲಿ ಹಳೇ ರೇಷನ್ ಕಾರ್ಡ್ ಕೊಡಲ್ಪಟ್ಟಿತ್ತು. ಈಗ ಸುಮಾರು 8-9 ವರ್ಷಗಳ ನಂತರ ಕೇವಲ ಚಿಮಣಿಎಣ್ಣೆ ಕೂಪನ್ ಪಡೆಯುವುದಕ್ಕೋಸ್ಕರ ಮಾತ್ರ ಫೋಟೋವನ್ನು ಅಳವಡಿಸಿದರೆ ಅದರಿಂದ ಏನೂ ಉಪಯೋಗವಾಗುವುದಿಲ್ಲ. ಅದರ ಬದಲು ಹೊಸ ರೇಷನ್ ಕಾರ್ಡನ್ನಾದರೂ ಕೊಟ್ಟರೆ, ನೀವು ಯಾವ ರೀತಿ ಸ್ಕ್ರೂಟಿನೈಸ್ ಮಾಡಬೇಕು ಎಂದು ಇದ್ದೀರಿ, ಅದನ್ನು ಮಾಡಿದ ಹಾಗೆ ಆಗುತ್ತದೆ. ಅದೇ ರೀತಿ ಫೋಟೋದ ಉಪಯೋಗ ಕೂಡ ಆಗುತ್ತದೆ. 35-40 ರೂಪಾಯಿ ಖರ್ಚು ಮಾಡಿ ಫೋಟೋ ಅಳವಡಿಸಿ ಚಿಮಣಿಎಣ್ಣೆ ತೆಗೆದುಕೊಳ್ಳುವಂಥಾದ್ದು ಸಾಧುವಲ್ಲ. ಈ ನಿಟ್ಟಿನಲ್ಲಿ ತಾವು ಇದನ್ನು ಸ್ಪಷ್ಟವಾಗಿ ಹೊಸ ರೇಷನ್ ಕಾರ್ಡಿಗೆ ಎಂದು ಮಾಡಬೇಕು. ಮತ್ತು ಅದನ್ನು ಅಳವಡಿಸಲು ಕನಿಷ್ಟ 2-3 ತಿಂಗಳು ಆಗಬಹುದು. ಈಗ ಏನು ಸಮಸ್ಯೆ ಬಂದಿದೆ ಎಂದರೆ ಫೋಟೋ ಇಲ್ಲದಿದ್ದರೆ ಯಾವುದೇ ಪಡಿತರ ಅಂಗಡಿಯಿಂದ ಯಾವುದೇ ಪಡಿತರ ಸಾಮಗ್ರಿಗಳನ್ನು ಕೊಡುತ್ತಿಲ್ಲ. ಇದರಿಂದ ಒಟ್ಟಾರೆ ಒಂದು ರೀತಿಯ ಕನ್‌ಫ್ಯೂಷನ್ ನಮ್ಮ ಕ್ಷೇತ್ರದಲ್ಲಿ ಉಂಟಾಗಿದೆ. ಇದರ ಬಗ್ಗೆ ತಾವು ಸ್ಪಷ್ಟವಾದ ಆದೇಶವನ್ನು ಕೊಡಬೇಕು ಮತ್ತು ಹೊಸ ರೇಷನ್ ಕಾರ್ಡುಗಳಿಗೆ ಅನುಮತಿ ಕೊಡಬೇಕು ಎನ್ನುವಂಥ ವಿನಂತಿಯನ್ನು ಮಾಡಿಕೊಳ್ಳುತ್ತೇನೆ.

ಶ್ರೀ ಜಿ. ಬಸವೆಣ್ಣೆಪ್ಪ (ಆಹಾರ ಮತ್ತು ನಾಗರೀಕ ಪೂರೈಕೆ ಸಚಿವರು) : ಸನ್ಮಾನ್ಯ ಉಪಾಧ್ಯಕ್ಷರೇ, ಸೀಮೆಎಣ್ಣೆ ವಿತರಣೆಯಲ್ಲಿ ಬಹಳ ಲೋಪದೋಷಗಳಿದ್ದವು. ಅರ್ಹ ಕಾರ್ಡುದಾರರಿಗೆ ಸೀಮೆಎಣ್ಣೆ ಸಿಗುತ್ತಿರಲಿಲ್ಲ. ಸೀಮೆಎಣ್ಣೆ ಕಾಳಸಂತೆಯಲ್ಲಿ ಹೋಗುತ್ತಿತ್ತು. ಇದನ್ನು ಸರಿಪಡಿಸುವುದಕ್ಕೋಸ್ಕರ ಕೂಪನ್ ಪದ್ಧತಿಯನ್ನು 1996-97ರಿಂದ ಜಾರಿಗೆ ತಂದಿದ್ದೇವೆ. ಕೂಪನ್ ಪದ್ಧತಿ ಜಾರಿಗೆ ಬಂದ ಮೇಲೆ ಕಾರ್ಡುದಾರರಿಗೆ ಸಿಗಬೇಕಾದ ಪ್ರಮಾಣದಲ್ಲಿ ಸೀಮೆಎಣ್ಣೆ ಸಿಗುತ್ತಿದೆ. ಅದು ಕಾಳಸಂತೆಗೆ ಹೋಗುತ್ತಿಲ್ಲ. ಇದನ್ನು ಸಾರ್ವಜನಿಕರೆಲ್ಲರೂ ಸ್ವಾಗತ ಮಾಡಿದ್ದಾರೆ. ಕೂಪನ್ ಪದ್ಧತಿಯನ್ನು ಜಾರಿಗೆ ತಂದುದರಿಂದ ಕೆಲವು ಬೋಗಸ್ ಕಾರ್ಡುಗಳು ಎಲಿಮಿನೇಟ್ ಆಗಿವೆ. ಇದನ್ನು ಪ್ರತಿಭಟನೆ ಮಾಡುವವರು ನ್ಯಾಯಬೆಲೆ ಅಂಗಡಿಗಳವರೇ ಹೊರತು ಸಾರ್ವಜನಿಕರಲ್ಲ. ಸಾರ್ವಜನಿಕರು ಈ ಕಾರ್ಯಕ್ರಮವನ್ನು ಒಪ್ಪಿದ್ದಾರೆ, ಸ್ವಾಗತಿಸಿದ್ದಾರೆ. ಇರುವಂಥ ಹಳೇ ಕಾರ್ಡುಗಳನ್ನು ರೀಪ್ಲೇಸ್ ಮಾಡಿ ಹೊಸ ಕಾರ್ಡುಗಳನ್ನು ಕೊಡಿ ಎಂದು ಹೇಳಿದ್ದಾರೆ. ಅದು ಒಳ್ಳೆಯ ಸಲಹೆ. 8-9 ವರ್ಷಗಳ ಹಿಂದೆ ಕೊಟ್ಟಂಥ ಕಾರ್ಡುಗಳು ಅವು. ಅವನ್ನು ಆದಷ್ಟು ಜಾಗ್ರತೆ ರೀಪ್ಲೇಸ್ ಮಾಡಿ ಹೊಸ ಕಾರ್ಡುಗಳನ್ನು ಕೊಡುವುದಕ್ಕೆ ಕ್ರಮ ಕೈಗೊಳ್ಳುತ್ತೇವೆ.

ತೀರ್ಥಹಳ್ಳಿ ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆಗಾಗಿ ಬಂದಂಥ ಮಹಿಳೆಯೊಬ್ಬರು ಸಾವನ್ನಪ್ಪಿರುವ ಬಗ್ಗೆ.

ಶ್ರೀ ಆರಗ ಜ್ಞಾನೇಂದ್ರ (ತೀರ್ಥಹಳ್ಳಿ) : ಸನ್ಮಾನ್ಯ ಉಪಾಧ್ಯಕ್ಷರೇ, ಕಳೆದ ಅಧಿವೇಶನದಲ್ಲಿ ನಾನು ನಮ್ಮ ಕ್ಷೇತ್ರವಾದ ತೀರ್ಥಹಳ್ಳಿಯ ಸರ್ಕಾರಿ ಆಸ್ಪತ್ರೆಯಲ್ಲಿ ಹೆರಿಗೆಗಾಗಿ ಬಂದಂಥ ಮಹಿಳೆಯೊಬ್ಬರು